ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ

C.C.No.324/2017

ಸಾಕ್ಷಿದಾರರ ಹೆಸರು	:	ಹರೀಶ್ ಕುಮಾರ ಪಿ.ಎಂ	CW-01
ತಂದೆಯ /ಗಂಡನ ಹೆಸರು	:	ಮಹದೇವಪ್ಪ	PW-01
ವಯಸ್ಸು	:	43 ವರ್ಷ	-
ಉದ್ಯೋಗ	:	PI ದೊಡ್ಡಬಳ್ಳಾಪುರ ರೂರಲ್ ಪೊಲೀಸ್ ಠಾಣೆ	ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **10.02.2023.**
ವಾಸಸ್ಥಳ	:	ದೊಡ್ಡಬಳ್ಳಾಪುರ	-

ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ

ನಾನು ಆಗಸ್ಟ 2016 ರಿಂದ ಜುಲೈ 2019 ರವರು ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ವೃತ್ತ ನಿರೀಕ್ಷಕರಾಗಿ ಕೆಲಸ ಮಾಡಿರುತ್ತೇನೆ. ದಿನಾಂಕ 01.10.2016 ರಂದು ಠಾಣಾ ಕರ್ತವ್ಯದ ಸಲುವಾಗಿ ಬೀಚನಹಳ್ಳಿ ಸರಹದ್ದಿನ ಸೋಗಹಳ್ಳಿ ಗ್ರಾಮಕ್ಕೆ ಠಾಣಾ ಸಿಬ್ಬಂದಿಗಳಾದ ಚಾಸಾ-2 ರಿಂದ 5 ರವರ ಜೊತೆ ಇಲಾಖಾ ಜೀಪನಲ್ಲಿ ಜೀಪ ಚಾಲಕ ಚಾಸಾ-6 ರವರ ಜೊತೆ ಹೋಗಿ ಮರಳಿ ಬರುವಾಗ ಅಂತರಸಂತೆ out post ಮುಂಭಾಗ ಮೈಸೂರು ಮಾನಂದವಾಡಿ ರಸ್ತೆಯಲ್ಲಿ IMV ಪ್ರಕರಣಗಳನ್ನು ದಾಖಲಿಸುತ್ತಿದ್ದ ಸಮಯದಲ್ಲಿ ಅಂತರಸಂತೆ ಕಡೆಯಿಂದ ಬಾವಲಿ ಕಡೆಗೆ ಕೆಎ 09 ಎಂ 1742 ಒಂದು ಮಾರುತಿ 800 ಕಾರ ಬಂದಿದ್ದು ಸದರಿ ಕಾರನ್ನು ಪರಿಶೀಲಿಸಿ ನೋಡಲಾಗಿ 90 ಎಂಎಲ್ ನ 68 ಒರಿಜಿನಲ್ ಚಾಯಿಸ್ ಡಿಲಕ್ಸ ವಿಸ್ಕಿಯ ಪ್ಯಾಕೆಟ್ ಗಳು ಸಿಕ್ಕಿರುತ್ತವೆ. ಈ ಬಗ್ಗೆ ಮತ್ತು ಕಾರಿನಲ್ಲಿದ್ದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಆತನ ಹೆಸರು ರಾಮಸ್ವಾಮಿ ಬಿನ್ ಸಿದ್ದೇಗೌಡ ಮಗ್ಗೆ ಗ್ರಾಮ ಎಂದು ಹೇಳಿದ್ದು ತನ್ನ ಬಳಿ ಸದರಿ ಪ್ರಮಾಣದ ಮದ್ಯದ ಪೌಚುಗಳನ್ನು ಇಟ್ಟುಕೊಳ್ಳಲು ಪರವಾನಗಿ ಇದೆಯಾ ಎಂದು ಕೇಳಲಾಗಿ ಆತನು ಯಾವುದೇ ಪರವಾನಗಿ ಇಲ್ಲ ಎಂದಿರುತ್ತಾನೆ. ಆಗ ಸಮಯ ಸಂಜೆ 7.30 ಗಂಟೆಯಾಗಿರುತ್ತೆ. ರಸ್ತೆಯಲ್ಲಿ ಹೋಗುತ್ತಿದ್ದ ಚಾಸಾ-7 ಮತ್ತು 8 ರವರನ್ನು ಪಂಚರುದಾರರನ್ನಾಗಿ ಬರಮಾಡಿಕೊಂಡು ವಿಷಯ ತಿಳಿಸಿ out post ಮುಂಭಾಗದ ವಿದ್ಯುತ್ ಬೆಳಕಿನಲ್ಲಿ ಅಮಾನತ್ತು ಪಂಚನಾಮೆಯನ್ನು ಜರುಗಿಸಿರುತ್ತೇನೆ. ಮಹಜರ್ ಕಾಲಕ್ಕೆ ಕಾರನ್ನು ವಶಕ್ಕೆ ಪಡೆದುಕೊಂಡು 90 ಎಂಎಲ್ 68 ಒರಿಜಿನಲ್ ಚಾಯಿಸ್ ಪೌಚುಗಳ ಪೈಕಿ 2 ಪೌಚುಗಳನ್ನು ಎಫಎಸ್ ಎಲ್ ಗೆ ಕಳುಹಿಸುವ ಸಲುವಾಗಿ ಒಂದು ಬಿಳಿಯ ಬಟ್ಟೆಯಲ್ಲಿ ಹಾಕಿ ಅದಕ್ಕೆ N ಎಂಬ ಅಕ್ಷರದಿಂದ ಸೀಲು ಮಾಡಿರುತ್ತೇವೆ. ಸದರಿ ಮಹಜರ್ ನ್ನು ಸಂಜೆ 7.30 ಗಂಟೆಯಿಂದ 8.15 ಗಂಟೆಯವರೆಗೆ ಜರುಗಿಸಿದ್ದು, ಸದರಿ ವೇಳೆಯಲ್ಲಿ ಚಾಸಾ-7 ಮತ್ತು 8 ರವರು ಹಾಜರಿದ್ದರು. ಸದರಿ ಮಹಜರ್ ನ್ನು ಚಾಸಾ-4 ರವರು ನಾನು ಹೇಳಿದಂತೆ ಬರೆದಿರುತ್ತಾರೆ. ಮುದ್ದೆ ಮಾಲುಗಳನ್ನು ವಶಪಡಿಸಿಕೊಳ್ಳುವ ಕಾಲದಲ್ಲಿ ಆರೋಪಿಯು ಪರಾರಿಯಾಗಿದ್ದು ಆತನನ್ನು ಸಿಬ್ಬಂದಿಗಳಾದ ಚಾಸಾ-3 ಮತ್ತು 5 ರವರು ಹಿಡಿಯಲು ಪ್ರಯತ್ನಪಟ್ಟಿರುತ್ತಾರೆ. ಸ್ಥಳದಲ್ಲಿ ಆರೋಪಿಯು ಸಿಕ್ಕಿರುವುದಿಲ್ಲ. ನಂತರ ವಶಪಡಿಸಿಕೊಂಡ ಮುದ್ದೆ ಮಾಲುಗಳ ಜೊತೆ ಬೀಚನಹಳ್ಳಿ ಪೊಲೀಸ್ ಠಾಣೆಗೆ ಹೋಗಿ

ಚಾಸಾ-11 ರವರಿಗೆ ಪಿರ್ಯಾದನ್ನು ಕೊಟ್ಟಿರುತ್ತೇನೆ. ಪಿರ್ಯಾದನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ), ಸ್ಥಳ ಮಹಜರ್ ನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆರೋಪಿತನಿಂದ ವಶಪಡಿಸಿಕೊಂಡ 68 ಸಾರಾಯಿ ಪೌಚುಗಳ ಪೈಕಿ 2 ಸಾರಾಯಿ ಪೌಚುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಪ್ರತ್ಯೇಕವಾಗಿ ತೆಗೆದಿದ್ದು ರಾಸಾಯನಿಕ ಪರೀಕ್ಷೆಯ ವರದಿ ಬಂದ ನಂತರ ಅಂತಿಮ ವರದಿ ಸಲ್ಲಿಸುವ ಕಾಲಕ್ಕೆ ನ್ಯಾಯಾಲಯಕ್ಕೆ ಹಾಜರು ಮಾಡಿದ್ದು ಅವುಗಳು ಈಗ ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ. ಅವುಗಳನ್ನು ಮು.ಮಾ-1 ಮತ್ತು 2 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ.ಎನ್.ಎನ್ ರವರಿಂದಃ</u>

ಚಾಸಾ-2 ರಿಂದ 6 ಹೊಸದಾಗಿ ಪೊಲೀಸ್ ಇಲಾಖೆಗೆ ಹಾಜರಾಗಿದ್ದು ಅವರಿಗೆ ಬೀಟ್ ಬಗ್ಗೆ ಟ್ರೈನಿಂಗ್ ಕೊಡಲು ನನ್ನೊಂದಿಗೆ ಕರೆದುಕೊಂಡು ಹೋಗಿದ್ದೆ. ಅಂತರಸಂತೆ ಉಪಠಾಣೆಯಲ್ಲಿ ಒಬ್ಬ ನಮ್ಮ ಠಾಣಾ ಸಿಬ್ಬಂದಿ ಇರುತ್ತಾರೆ. ನಾನು ನಮ್ಮ ಸಿಬ್ಬಂದಿಗಳ ಜೊತೆ ಇದ್ದು ಐಎಂವಿ ಕೇಸುಗಳನ್ನು ನೊಂದಣಿ ಮಾಡುತ್ತಿದ್ದೆ ಎಂದರೆ ಸರಿ. ನಾವು ತಪಾಸು ಮಾಡುತ್ತಿದ್ದ ಸ್ಥಳ ಸಾರ್ವಜನಿಕರು ಓಡಾಡುವ ಸ್ಥಳ ಎಂದರೆ ಸರಿ. ಆರೋಪಿಯು ಹೊರಗಿದ್ದ ಕಾರನ್ನು ತಪಾಸಣೆ ಮಾಡಿ ನೋಡಲಾಗಿ ಕಾರಿನಲ್ಲಿ 90 ಎಂಎಲ್ ನ 68 ಸಾರಾಯಿ ಪೌಚುಗಳು ಇದ್ದವು ಎಂದು ಹೇಳಿದ್ದು ಆರೋಪಿಯು ಓಡಿ ಹೋಗಿರುತ್ತಾನೆ ಎಂದು ಹೇಳಿದ್ದು ಹೇಗೆ ಆತನ ಹೆಸರು ಗೊತ್ತಾಯಿತು ಎಂದು ಕೇಳಲಾಗಿ ಸಾಕ್ಷಿಯು ಆತ ಓಡಿ ಹೋಗುವ ಮೊದಲೇ ಹೆಸರು ಹೇಳಿರುತ್ತಾನೆ ಎಂದು ನುಡಿಯುತ್ತಾರೆ. ಚಾಸಾ-7 ಮತ್ತು 8 ರವರು ರಸ್ತೆಯಲ್ಲಿ ಹೋಗುತ್ತಿದ್ದು ಅವರನ್ನು ಕೇಳಿಕೊಂಡಾಗ ಈ ಕೇಸಿನ ಪಂಚರುದಾರರಾಗಿ ಒಪ್ಪಿ ಬಂದಿರುತ್ತಾರೆ. ಚಾಸಾ-7 ಮಚ್ಚರೆ ಗ್ರಾಮ, ಚಾಸಾ-8 ಹೊಸಮಾಳ ಗ್ರಾಮದವರು ಎಂದು ನುಡಿಯುತ್ತಾರೆ. ಚಾಸಾ-7 ಮತ್ತು 8 ರಸ್ತೆಯಲ್ಲಿ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮತ್ತು ಚಾಸಾ-7 ಮತ್ತು 8 ರವರ ಸಮಕ್ಷಮ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ಆರೋಪಿಯು ಮುದ್ದೆ ಮಾಲುಗಳನ್ನು ಬಿಟ್ಟು ಹೋಗಿರುತ್ತಾನೆ ಎಂದು ನುಡಿಯುತ್ತಾರೆ. ದಿನಾಂಕ 01.10.2016 ರಂದು ಆರೋಪಿಯು ಯಾವುದೇ ಕಾರನ್ನು ಚಲಾಯಿಸುತ್ತಿರಲಿಲ್ಲ ಮುದ್ದೆ ಮಾಲುಗಳು ಆತನಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಾವು ರಸ್ತೆಯಲ್ಲಿ ನಿಂತು ವಾಹನ ತಪಾಸಣೆ ಮಾಡುತ್ತಿದ್ದಾಗ ನಾನು ಹೇಳಿದ ರೀತ್ಯಾ ಯಾವುದೇ ಮುದ್ದೆ ಮಾಲುಗಳು ಸಿಕ್ಕಿದ್ದವು ಎಂದರೆ ಸರಿ. ಅಂತರಸಂತೆಯಿಂದ ಬೀಚನಹಳ್ಳಿಗೆ ಸುಮಾರು 10 ರಿಂದ 12 ಕಿಮೀ ಅಂತರವಿದೆ. ಬೀಚನಹಳ್ಳಿ ಪೊಲೀಸ್ ಠಾಣೆಗೆ ಹೋಗಿ ಪಿರ್ಯಾದನ್ನು ನೀಡಿ ಅಲ್ಲೆ ಪಿರ್ಯಾದನ್ನು ಟೈಪ್ ಮಾಡಿರುತ್ತೇನೆ. ಆರೋಪಿಗೂ ಮತ್ತು ಮುದ್ದೆ ಮಾಲುಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ

ಸರಿಯಲ್ಲ. ನಮ್ಮ ಠಾಣೆಯ ಅಂಕಿ ಅಂಶ ತೋರಿಸಲು ಆರೋಪಿಯ ವಿರುದ್ದ ಸುಳ್ಳು ಕೇಸು ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಒ.,

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೆಗ್ಗಡದೇವನಕೋಟೆ.